**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ.**

**CC No. 312/2023**

**PW-7 CW-7**

| | | |
|---|---|---|
| ಸಾಕ್ಷಿದಾರನ ಹೆಸರು | : | ಬಿಲ್ಲಪ್ಪ ತಂದೆ ಪ್ರಭಣ್ಣ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಮಸರಕಲ್ |
| ಪ್ರಮಾಣಿಕರಿಸಿದ ದಿನಾಂಕ | : | 05-04-2025 |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ಚಾಸಾ-1 ನನಗೆ ಸೊಸೆಯಾಗಬೇಕು. ಚಾಸಾ-2 ರಿಂದ 6, 8 ಮತ್ತು 9 ರವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ಇರುತ್ತದೆ.

1 ನೇ ಆರೋಪಿ ಮತ್ತು ಚಾಸಾ-1 ರವರ ಮದುವೆಯನ್ನು ನಾನೇ ಮಾಡಿಸಿರುತ್ತೇನೆ. ಮದುವೆಯಾದ ನಂತರ ಎರಡು ಮಕ್ಕಳಾಗುವವರೆಗೆ ಚೆನ್ನಾಗಿ ನೋಡಿಕೊಂಡು ನಂತರ ವರದಕ್ಷಿಣೆ ತರುವಂತೆ ಹೊಡಿ-ಬಡಿ ಮಾಡಿ ಮಾನಸಿಕ, ದೈಹಿಕ ಕಿರುಕುಳವನ್ನು ಆರೋಪಿತರು ನೀಡಿ ತವರು ಮನೆಗೆ ಕಳುಹಿಸಿರುತ್ತಾರೆ ಎಂದು ಸದರಿ ಚಾಸಾ-1 ರವರು ನನಗೆ ತಿಳಿಸಿರುತ್ತಾರೆ. ಆರೋಪಿತರು ಕುಡಿದು ಬಂದು ದಿನಾಲೂ ಹೊಡೆಯುತ್ತಾನೆ ಎಂದು ನನಗೆ ಮನೆಯಲ್ಲಿ ಇರಲು ಆಗುವುದಿಲ್ಲ ಎಂದು ಹೇಳಿರುತ್ತಾಳೆ. ಆ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಆರ್.ಕೆ ವಕೀಲರಿಂದ.**

ನನ್ನ ಹೆಂಡತಿಯ ಹೆಸರು ಸೌಭಾಗ್ಯಮ್ಮ ಎಂದು ಇರುತ್ತದೆ. ಚಾಸಾ-1 ನನ್ನ ಹೆಂಡತಿಯ ಕಾಸಾ ತಂಗಿ ಆಗಬೇಕು. ನನ್ನ ಮದುವೆಯಾಗಿ ಅಂದಾಜು 20 ವರ್ಷ ಆಗಿರುತ್ತದೆ. ಚಾಸಾ-1 ರವರ ಮದುವೆ 2016 ರಲ್ಲಿ ಆಗಿರುತ್ತದೆ. ಚಾಸಾ-1 ರವರ ಮದುವೆಯನ್ನು ಅವರ ತಂದೆ-ತಾಯಿ ಕುರುಕುಂದಾ ಗ್ರಾಮದಲ್ಲಿ ಮಾಡಿರುತ್ತಾರೆ. ಚಾಸಾ-1 ರವರಿಗೆ ಎರಡು ಮಕ್ಕಳು ಜನಿಸಿದ ನಂತರ ವರದಕ್ಷಿಣೆ ತರುವಂತೆ ಕಿರುಕುಳ ನೀಡಲು ಪ್ರಾರಂಭಿಸಿರುತ್ತಾರೆ. ನಾನು ಕುರುಕುಂದಿ ಗ್ರಾಮಕ್ಕೆ ಹೋಗಿರುವುದಿಲ್ಲ. ಒಂದು ಭಾರಿ ಕುರುಕುಂದಾ ಗ್ರಾಮಕ್ಕೆ ಹೋದಾಗ ಆರೋಪಿತರು ಜಗಳ ಮಾಡಿದ್ದರಿಂದ ನಾನು ಮುಂದೆ ಕುರುಕುಂದಾ ಗ್ರಾಮಕ್ಕೆ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರು ಆರೋಪಿತರು ಕಿರುಕುಳ ನೀಡುತ್ತಿರುವ ಬಗ್ಗೆ ಹೇಳಿದ್ದರಿಂದ ನನಗೆ ಗೊತ್ತಾಗಿರುತ್ತದೆ. ದೇವರಾಜನಿಗೆ ಒರ್ವ ಸಹೋದರ ಇರುತ್ತಾನೆ. ಸದರಿ ದೇವರಾಜ

CC No. 312/2023
PW-7/CW-7

ಮತ್ತು ಆತನ ಸಹೋದರ ವಿಭಾಗ ಆದ ಬಗ್ಗೆ ನನಗೆ ಗೊತ್ತಿಲ್ಲ. 1 ನೇ ಆರೋಪಿತನ ತಂದೆ-ತಾಯಿ ಯಾರೊಂದಿಗೆ ವಾಸವಿರುತ್ತಾರೆ ನನಗೆ ಗೊತ್ತಿಲ್ಲ. 1 ನೇ ಆರೋಪಿತನ ತಂದೆ-ತಾಯಿ 1 ನೇ ಆರೋಪಿಯೊಂದಿಗೆ ಒಂದೇ ಮನೆಯಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ-1 ರವರು ನಾವಷ್ಟೆ ಅತ್ತೆ ಮಾವನನ್ನು ಏಕೆ ನೋಡಿಕೊಳ್ಳಬೇಕು ಎಂದು ಗಂಡನೊಂದಿಗೆ ಜಗಳವಾಡುತ್ತಿದ್ದಳು ಎಂದರೆ ಸರಿಯಲ್ಲ. 1 ನೇ ಆರೋಪಿ ಆ ಕುರಿತು ಬುದ್ಧಿವಾದ ಹೇಳುತ್ತಿದ್ದ ಎಂದರೆ ಸರಿಯಲ್ಲ. ತಂದೆ-ತಾಯಿಯಿಂದ ಬೇರೆ ಆಗುವಂತೆ ಚಾಸಾ-1 ರವರು 1 ನೇ ಆರೋಪಿಗೆ ತೊಂದರೆ ನೀಡುತ್ತಿದ್ದಳು ಎಂದರೆ ಸರಿಯಲ್ಲ. ಚಾಸಾ-1 ರವರು ತಾನಾಗಿಯೇ ಆರೋಪಿ ಮನೆಯನ್ನು ಬಿಟ್ಟು ಹೋಗಿ ತವರು ಮನೆಯಲ್ಲಿ ವಾಸವಿರುತ್ತಾಳೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಯಾವುದೇ ಮಾನಸಿಕ, ದೈಹಿಕ ಕಿರುಕುಳ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ವರದಕ್ಷಿಣೆ ತರುವಂತೆ ಆರೋಪಿತರೆಲ್ಲರೂ ಮಾನಸಿಕ, ದೈಹಿಕ ಕಿರುಕುಳ ನೀಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.